ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರವರ ಕಛೇರಿ ಎನ್.ಆರ್ ಚೌಕ, ಬೆಂಗಳೂರು-560002

ಸಂಖ್ಯೆ:ಕಅ/ಕೇಂಕ/ಪಿ.ಆರ್/ 789/2017-18 ದಿನಾಂಕ: 07/03/2019

ಕಛೇರಿ ಆದೇಶ

ವಿಷಯ: 2017-18 ಮತ್ತು 2018-19ನೇ ಸಾಲಿನ ಆಯವ್ಯಯದ ಮಹಿಳಾ ಕಲ್ಯಾಣ ಕಾರ್ಯಕ್ರಮಗಳಡಿ ಹೊಲಿಗೆ ಯಂತ್ರಗಳನ್ನು ವಿತರಿಸುವ ಬಗ್ಗೆ

ಉಲ್ಲೇಖ: 1. ಮಾನ್ಯ ಆಯುಕ್ತರವರ ಅನುಮೋದನೆ ದಿನಾಂಕ:- /03/2019
2. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸ್ವಯಂ ನಿರ್ಣಯ ವಿಷಯದ ಸಂಖ್ಯೆ:ಸಾನ್ಯಾಸ್ಥಾಸ/102/2018-19 ದಿನಾಂಕ: 02-02-2019.
3. 2018-19ನೇ ಸಾಲಿನ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ಮಾನ್ಯ ಆಯುಕ್ತರರವರ ಕಛೇರಿ ಆದೇಶದ ಸಂಖ್ಯೆ:ಕಅ/ಕೇ.ಕಂ/ಪಿಆರ್/401/2018-19 ದಿನಾಂಕ:25-10-2018
4. 2017-18ನೇ ಸಾಲಿನ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ಮಾನ್ಯ ಆಯುಕ್ತರರವರ ಕಛೇರಿ ಆದೇಶದ ಸಂಖ್ಯೆ:ಕಅ/ಕೇ.ಕಂ/ಪಿಆರ್/789/2017-18 ದಿನಾಂಕ:20-11-2017
5. 2017-18ನೇ ಸಾಲಿನ ಅನುಮೋದಿತ ಆಯವ್ಯಯ ಅಂದಾಜುಗಳು.
6. 2016-17ನೇ ಸಾಲಿನ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ಮಾನ್ಯ ಆಯುಕ್ತರರವರ ಕಛೇರಿ ಆದೇಶದ ಸಂಖ್ಯೆ:ಕಅ/ಕೇ.ಕಂ/ಪಿಆರ್/372/2016-17 ದಿನಾಂಕ:25-10-2016

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(5)ರಲ್ಲಿ ಮಹಿಳಾ ಕಲ್ಯಾಣ ಕಾರ್ಯಕ್ರಮಗಳು ಪಿ-937ರಡಿ ರೂ.1010:00 ಲಕ್ಷಗಳ ಅನುದಾನವನ್ನು ಸಾ.ನ್ಯಾ.ಸ್ಥಾ.ಸಮಿತಿ ನಿರ್ಣಯದಂತೆ ಹಂಚಿಕೆ ಮಾಡಲಾಗಿದೆ(ರೂ5.00*100=500.00 ಲಕ್ಷಗಳು). ಸದರಿ ಅನುಧಾನವನ್ನು ಕಾಮಗಾರಿ ಯೋಜನೆಗಳನ್ನು ಹೊರತು ಪಡಿಸಿ ಪಾಲಿಕೆಯಲ್ಲಿ ಜಾರಿಯಲ್ಲಿರುವ ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಮಹಿಳಾ ಫಲಾನುಭವಿಗಳಿಗೆ ಮಾತ್ರ ಸದ್ವಿನಿಯೋಗ ಮಾಡಿಕೊಳ್ಳಲು ಸಾ.ನ್ಯಾ.ಸ್ಥಾ.ಸಮಿತಿಯು ತೀರ್ಮಾನಿಸಲಾಗಿದೆ ಅದರಂತೆ ಕ್ರಮವಹಿಸಲು ಆದೇಶಿಸಲಾಗಿದೆ.

ಉಲ್ಲೇಖ(4)ರ ಆದೇಶದಲ್ಲಿ 2016-17ನೇ ಸಾಲಿನ ಪಿಕೋಡ್:1937 ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ ಮಹಿಳಾ ಸದಸ್ಯರು ಪ್ರತಿನಿಧಿಸಿರುವ ವಾರ್ಡ್‌ಗೆ ಹಂಚಿಕೆ ಮಾಡಲಾಗಿರುವ ಅನುದಾನ ರೂ.5.00 ಲಕ್ಷಗಳು ಹಾಗೂ ಈ ಆದೇಶದ ಮೂಲಕ ಹಂಚಿಕೆ ಮಾಡಿರುವ ರೂ.5.00 ಲಕ್ಷಗಳು ಒಟ್ಟು ರೂ.10.00 ಲಕ್ಷಗಳಲ್ಲಿ ಪಾಲಿಕೆಯ ತೀರ್ಮಾನದ ದಿನಾಂಕ:29/06/2017ರ ಮೇರಿಗೆ ಒದಗಿಸಿ ಮಹಿಳಾ ಹೊಲಿಗೆ ತರಬೇತಿ ಅಭ್ಯರ್ಥಿಗಳಿಗೆ ವಿತರಿಸಲು ಪರಿಶೀಲಿಸಿ ಪಾವತಿಸಲು ಆದೇಶಿಸಲಾಗಿದೆ.

ಉಲ್ಲೇಖ(3)ರ ಆದೇಶದಲ್ಲಿ ಮಹಿಳಾ ಮತ್ತು ಕಲ್ಯಾಣ ಪಿ-341ರಡಿ ರೂ.10.00 ಲಕ್ಷಗಳ ಪ್ರತಿ ವಾರ್ಡ್‌ಗೆ

ಮುಂದುವರೆದು, ಉಲ್ಲೇಖ (2)ರಲ್ಲಿ ಸಾ.ನ್ಯಾ.ಸ್ಥಾ.ಸ ನಿರ್ಣಯದಂತೆ, 2017-18 ಹಾಗೂ ಅದಕ್ಕಿಂತ ಹಿಂದಿನ ಸಾಲಿಗೆ ಸಂಬಂಧಿಸಿದಂತೆ ಪಾಲಿಕೆಯ ಹೊಲಿಗೆ ತರಬೇತಿ ಕೇಂದ್ರಗಳ ಹೊರತುಪಡಿಸಿ ಇತರೆ ಕಡೆಗಳಲ್ಲಿ ತರಬೇತಿ ಪಡೆದಿರುವಂತಹ ಮಹಿಳೆಯರಿಗೂ ಹೊಲಿಗೆ ಯಂತ್ರಗಳನ್ನು ವಿತರಿಸಲು ಅನುಮೋದಿಸಲಾಗಿದೆ ಹಾಗೂ ವಿತರಣೆ ಮಾಡುವ ಸಮಯದಲ್ಲಿ ಫಲಾನುಭವಿಗಳಿಂದ ಒಂದು ತಿಂಗಳೊಳಗಾಗಿ ಪಾಲಿಕೆಯ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆಯಲಾಗುವುದೆಂದು ಫಲಾನುಭವಿಯಿಂದ ಅಫಿಡೇವಿಟ್ ಪಡೆಯಲು ಆದೇಶಿಸಲಾಗಿದೆ.

2018-19ನೇ ಸಾಲಿನಿಂದ ಪಾಲಿಕೆಯ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆದು ಉತ್ತೀರ್ಣರಾದ ಪ್ರಮಾಣ ಪತ್ರಗಳನ್ನು ಪಡೆದ ಫಲಾನುಭವಿಗಳಿಗೆ ಮಾತ್ರ ಪರಿಗಣಿಸಲಾಗುವುದು.

ಮಾನ್ಯ ಆಯುಕ್ತರವರ ಆದೇಶದ ಮೇರೆಗೆ)

ವಿಶೇಷ ಆಯುಕ್ತರು (ಕಲ್ಯಾಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

1. ಅಪರ/ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ / ಮಹಾದೇವಪುರ /ಆರ್.ಆರ್.ನಗರ / ದಾಸರಹಳ್ಳಿ / ಯಲಹಂಕ) ವಲಯ, ರವರಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
2. ಉಪ ಆಯುಕ್ತರು(ಪೂರ್ವ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ /ಮಹಾದೇವಪುರ ಆರ್.ಆರ್.ನಗರ /ದಾಸರಹಳ್ಳಿ/ ಯಲಹಂಕ) ವಲಯ, ರವರಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
3. ಸಹಾಯಕ ಕಲ್ಯಾಣಾಧಿಕಾರಿಗಳು (ಪೂರ್ವ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ /ಮಹಾದೇವಪುರ /ಆರ್.ಆರ್.ನಗರ /ದಾಸರಹಳ್ಳಿ/ ಯಲಹಂಕ) ವಲಯ ರವರಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
4. ಕೌನ್ಸಿಲ್ ಕಾರ್ಯದರ್ಶಿ ರವರ ಕಛೇರಿಗೆ ಕಳುಹಿಸುತ್ತಾ, ಪಾಲಿಕೆಯ ಮಹಿಳಾ ಸದಸ್ಯರಿಗೆ ಒಂದು ಪ್ರತಿಯನ್ನು ನೀಡಲು ಸೂಚಿಸಿದೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
2. ಮಾನ್ಯ ಅಧ್ಯಕ್ಷರು, ಸಾ.ನ್ಯಾ.ಸ್ಥಾ.ಸಮಿತಿಯವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
3. ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
4. ವಿಶೇಷ ಆಯುಕ್ತರು (ಕಲ್ಯಾಣ/ಯೋಜನೆ/ಹಣಕಾಸು) ರವರ ಅಗತ್ಯ ಕ್ರಮಕ್ಕಾಗಿ.
5. ಪ್ರಧಾನ ಅಭಿಯಂತರರು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
6. ಮುಖ್ಯ ಲೆಕ್ಕಾಧಿಕಾರಿಗಳು ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
7. ಮುಖ್ಯ ಆರ್ಥಿಕಾಧಿಕಾರಿಗಳು ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.